ಲಕ್ಷ., ೧೯೮೮-೮೯ನೇ ಸಾಲಿನಲ್ಲಿ ಈ ಕೆಲಸಕ್ಕಾಗಿ ೪ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸಮುದ್ರ ಕೊರೆತ ನಿರೋಧ ಧನ ತಜ್ಞರ ಸಮಿತಿಯ ಅನುಮತಿ ಪಡೆದು ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯ ಅನ್ವಯ ಸಮುದ್ರ ಕೊರೆತವನ್ನು ರಕ್ಷಿಸಲು ಎರಡು ಸ್ಪರ್‌ಗಳನ್ನು ನಿರ್ಮಿಸಲಾಗಿದೆ. ಎರಡನೇ ಹಂತದಲ್ಲಿ ಇದೇ ಮಾದರಿಯ ೧೨ ಸ್ಪರ್‌ಗಳನ್ನು ನಿರ್ಮಿಸಲಾಗುವುದು. ಇದರಿಂದ ಶಾಶ್ವತ ಪರಿಹಾರ ಆಗುವ ನಿರೀಕ್ಷೆ ಇದೆ. ಸಮುದ್ರ ಕೊರೆತದ ಶಾಶ್ವತ ರಕ್ಷಣಾ ಕಾಮಗಾರಿಗಳಿಗೆ ರಾಜ್ಯ ಸರ್ಕಾರವು ಸಧ್ಯಕ್ಕೆ ಕ್ಷೀಣ ಒದಗಿಸಿರುತ್ತದೆ. ಸಮುದ್ರ ಕೊರೆತ ನಿರೋಧ ಯೋಜನೆಗೆ ೧೯೮೬-೮೭ರಲ್ಲಿ ೬೬.೬ ಲಕ್ಷ ರೂಪಾಯಿಗಳನ್ನು ೧೯೮೭-೮೮ರಲ್ಲಿ ೫೭ ಲಕ್ಷ ರೂಪಾಯಿಗಳು ಖರ್ಚಾಗಿವೆ. ೧೯೮೮-೮೯ನೇ ಇಸವಿಯಲ್ಲಿ ೭೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇಲ್ಲಿಯವರೆಗೆ ಕೇಂದ್ರಸರ್ಕಾರದ ನೆರವು ದೊರೆತಿಲ್ಲ. ನೀವು ಹೇಳಿದಿರಲ್ಲ, ನೀನೇ ಮಾಡಿ ಎಂದು. ಅವರು ಕೊಡುವುದನ್ನು ಕಾಯುದೇ ನಾವೇ ಮಾಡಿದ್ದೇವೆ.

೧೧ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿಗೋಶನ್ ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿ ಇಲ್ಲದಿರುವುದು

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಅಧ್ಯಕ್ಷರೇ, ಪ್ರತಿ ಸರಕಾರಿ ಆಸ್ಪತ್ರೆಗೆ ಒಂದು ಸಂದರ್ಶಕ ಸಮಿತಿ ಇದು ಸರಕಾರದ ನೀತಿ. ಆದರೆ ಮಂಗಳೂರಿನ ಜಿಲ್ಲಾ ಕೇಂದ್ರದ ಆಸ್ಪತ್ರೆಗಳಿಗೆ ಬೇರೆಯೇ ರೀತಿ. ಜಿಲ್ಲಾ ಸರಕಾರಿ ವೆನ್ ಲಾಕ್ ಆಸ್ಪತ್ರೆ ಮತ್ತು ಲೇಡಿ ಗೋಶನ್ ಆಸ್ಪತ್ರೆಗಳಲ್ಲಿ ಇಲ್ಲವೇ ಇಲ್ಲ ಸಂದರ್ಶಕ ಸಮಿತಿ.

ಜಿಲ್ಲೆಯ ಎಲ್ಲಾ ಕಡೆಗಳಿಂದ ರೋಗಿಗಳು ಬರುವ ಆಸ್ಪತ್ರೆಗಳಿಗೆ ವೈದ್ಯಕೀಯ ಶಿಕ್ಷಣ ನೀಡುವ ಆಸ್ಪತ್ರೆಗಳಿಗೆ ಸಾಕಷ್ಟು ಸಮಸ್ಯೆಗಳಿವೆ. ಇವುಗಳ ನಿವಾರಣೆಗೆ ಬೇಕೇ ಬೇಕು ಸಂದರ್ಶಕ ಸಮಿತಿ. ಇಲ್ಲವಾದರೆ ಸಾರ್ವಜನಿಕರಿಗೆ ತೊಂಬ ಫಜೀತಿ. ಆದಷ್ಟು ಬೇಗ ಸಮಿತಿ ರಚಿಸಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂದರ್ಶಕರ ಸಮಿತಿಯನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಬೇಗ ಮಾಡುವುದಕ್ಕೆ ಸನ್ಮಾನ್ಯ ಸಚಿವರನ್ನು ಮನವಿಮಾಡಿಕೊಳ್ಳುತ್ತೇನೆ.

೧೨ ಗುಲ್ಬರ್ಗ ಜಿಲ್ಲೆಯ ರೈತರಿಗೆ ಡಿ.ಸಿ. ಎಚ್-೩೨ ಹತ್ತಿ ಬೀಜವನ್ನು ಪೂರೈಸುವುದು

ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆ ರೈತರಿಗೆ ಹೈಬ್ರೀಡ್ ಹತ್ತಿ ಉತ್ತಮವಾದ ವಾಣಿಜ್ಯ ಬೆಳೆಯಾದ್ದು ರೈತರಿಗೆ ಲಾಭದಾಯಕವಾಗಿದೆ. ಇದನ್ನು ನೀರಾವರಿ ಹಾಗೂ ಖುಷ್ಕಿಯಲ್ಲಿ ಬೆಳೆಯಬಹುದಾಗಿದೆ. ಜಿಲ್ಲೆಯಲ್ಲಿ ೧೯೮೭-೮೮ ಹಂಗಾಮಿನಲ್ಲಿನ ಸುಮಾರು ೧೫ ಸಾವಿರ ಎಕರೆ ಪ್ರದೇಶದಲ್ಲಿ ಹೈಬ್ರೀಡ್ ಹತ್ತಿ ಡಿ.ಸಿ.ಹೆಚ್. ೩೨ ಬೆಳೆಯಲಾಗಿದ್ದು ಅದೇ ಜಿಲ್ಲೆಯ ನನ್ನ ಕ್ಷೇತ್ರವಾದ ಚಿಂಚೋಳಿ ತಾಲ್ಲೂಕಿನಲ್ಲಿ ಸುಮಾರು ೧೦ ಸಾವಿರ ಎಕರೆ ಪ್ರದೇಶದಲ್ಲಿ ಈ ಹತ್ತಿ ಬೆಳೆಯಲಾಗಿದೆ. ಆದರೆ ಕರ್ನಾಟಕ ಬೀಜ ನಿಗಮದ ಪತಿಯಿಂದ ಕೇವಲ ೩೬ ಕ್ವಿಂಟಾಲ್ ಬೀಜಗಳನ್ನು ಮಾತ್ರ ಸರಬರಾಜು ಮಾಡಲಾಯಿತು. ಇದರಿಂದಾಗಿ ಅನೇಕ ರೈತರು ವಿವಿಧ ಅನಧಿಕೃತ ಬೀಜಗಳನ್ನು ಖರೀದಿಸಿ ನಷ್ಟಕ್ಕೆ ತುತ್ತಾಗಬೇಕಾಯಿತು. ಮಂಬರುವ ೧೯೮೮-೮೯ರ ಸಾಲಿನಲ್ಲಿ ನಮ್ಮ ಜಿಲ್ಲೆಯಲ್ಲಿ ಸುಮಾರು ೨೦ ಸಾವಿರ ಎಕರೆ ಪ್ರದೇಶದಲ್ಲಿ ಡಿ.ಸಿ ಹೆಚ್. ೩೨ ಹತ್ತಿ ಬಿತ್ತನೆಯಾಗುವ ಸಂಭವವಿದ್ದು, ಚಿಂಚೋಳಿ ಒಂದೇ ತಾಲ್ಲೂಕಿನಲ್ಲಿ ಸುಮಾರು ೧೫ ಸಾವಿರ ಎಕರೆ ಪ್ರದೇಶದಲ್ಲಿ ಹತ್ತಿ ಬೆಳೆಯಬಹುದಾಗಿದೆ. ಆದರೆ ಈಗಾಗಲೇ ಕೇವಲ ೪೬ ಕ್ವಿಂಟಾಲ್ ಹತ್ತಿ ಬೀಜವನ್ನು ಸರಬರಾಜು ಮಾಡಲು ನಿಗದಿ ಪಡಿಸಲಾಗಿದೆಯೆಂದು ತಿಳಿದು ಬಂದಿದೆ. ಮೇಲೆ ನಮೂದಿಸಿದ ಸುಮಾರು ೨೦ ಸಾವಿರ ಎಕರೆ ಹತ್ತಿ ಬಿತ್ತನೆಗೆ ಕನಿಷ್ಟ ೨೦೦ ಕ್ವಿಂಟಾಲ್ ಡಿ.ಸಿ.ಹೆಚ್. ೩೨ ಹತ್ತಿ ಬೀಜ ಬೇಕಾಗುತ್ತದೆ. ಕಾರಣ ಸರಕಾರ, ನಮ್ಮ ರಾಜ್ಯದ ಇತರ ಭಾಗದಿಂದ ಅಥವಾ ಸರೆಹೊರೆ ರಾಜ್ಯಗಳಿಂದ ಪ್ರಾಮಾಣಿಕ